**ದಿನಾಂಕಃ 10.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿಗಳ ಪರ ವಕೀಲರಿಂದಃ –**

17. ಆಗಸ್ಟ್ 2016 ರಲ್ಲಿ ಎಸಿಬಿ ಪೋಲೀಸ್ ಠಾಣೆಗೆ ಪಿಐ ಆಗಿ ಕರ್ತವ್ಯ ನಿರ್ವಹಿಸುವ ಮುಂಚೆ ನಾನು ಪಿಎಸ್ಐ ಆಗಿದ್ದೆ. ನಾನು ಎಸಿಬಿ ಪೋಲೀಸ್ ಠಾಣೆಗೆ ಪಿಐ ಆಗಿ ಬಂದ ನಂತರ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವುದನ್ನು ಬಿಟ್ಟು ಸ್ವತಂತ್ರವಾಗಿ ಬೇರೆ ಪ್ರಕರಣಗಳಲ್ಲಿ ತನಿಖೆ ಮಾಡಿರುತ್ತೇನೆ. ಮೈಸೂರು ಎಸಿಬಿ ಕಛೇರಿಯಲ್ಲಿ ಇಬ್ಬರು ಪೋಲೀಸ್ ಇನ್ಸ್‌ಪೆಕ್ಟರ್ ಇದ್ದೆವು. ದಿಃ 14.07.2017 ರಂದು ಸದರಿ ಪ್ರಕರಣದಲ್ಲಿ ನನ್ನ ಮೇಲಾಧಿಕಾರಿಗಳು ಗಜೇಂದ್ರ ಪ್ರಸಾದ್ ರವರು ನೀಡುತ್ತಿದ್ದ ನಿರ್ದೇಶನಗಳನ್ನು ಪಾಲಿಸುತ್ತಿದ್ದೆ ಎಂದರೆ ಸರಿ . ದಿಃ 15.07.2017 ರಂದು ಚಾ.ಸಾ. 16 ರವರು ನಿಪಿ 27 ರಲ್ಲಿ ನೀವು ಮುಂದಿನ ತನಿಖೆಯನ್ನು ನಿರ್ವಹಿಸಬೇಕೆಂದು ಸೂಚಿಸಿದ್ದು , ಸದರಿ ನಿಪಿ 27 ರಲ್ಲಿ ನೀವು ಪ್ರಕರಣಗಳನ್ನು ಸ್ವತಂತ್ರವಾಗಿ ತನಿಖೆ ನಡೆಸಿರುತ್ತೀರಿ ಎಂದು ಹೇಳಿ ನಮೂದಿಸಲಾಗಿರುತ್ತದೆಯೇ, ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ 29 ರಲ್ಲಿ ದಿ 21.07.2017 ರಂದು ತಹಸೀಲ್ದಾರ್ , ಮೈಸೂರು ರವರು ಅವರ ಕಛೇರಿಗೆ ಅಳವಡಿಸಿದ ಸಿಸಿ ಕ್ಯಾಮರಾಗಳು ದುರಸ್ಥಿಯಲ್ಲಿರುವುದಾಗಿ ತಿಳಿಸಿದ್ದು , ಸದರಿ ಪತ್ರ ಪಡೆದ ನಂತರ ಸ್ವತಂತ್ರವಾಗಿ ಅದರಲ್ಲಿರುವ ಅಂಶಗಳನ್ನು ಪರಿಶೀಲಿಸಿರುತ್ತೀರಿ, ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ 25 ನಕಾಶೆಯಲ್ಲಿ ಆರೋಪಿಯ ಕಛೇರಿಯ ಬಗ್ಗೆ ನಮೂದು ಆಗಿರುತ್ತದೆ ಅದರಲ್ಲಿ ರೂಂ. 8 ಎಂದು ಬರೆಯಲಾಗಿರುತ್ತದೆ , ಆರೋಪಿಯ ಕಛೇರಿ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ . ಆರೋಪಿಯ ಕಛೇರಿ ಸಿದ್ದಲಿಂಗಪುರದಲ್ಲಿ ಇರುತ್ತದೆ ಎಂದರೆ ಸರಿ . ನಿಮ್ಮ ತನಿಖಾ ಕಾಲದಲ್ಲಿ ರೂಂ.ನಂ.8 ಭೂಮಿ ಕೇಂದ್ರದಲ್ಲಿ ಬೇರೆ ಯಾರು ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ವಿಚಾರಿಸಿರುತ್ತೀರಿಯೇ, ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

18. ನಿಪಿ 33 ನಕ್ಷೆಯಲ್ಲಿ ಕೇವಲ ರೂಂ. ನಂ. 8 ಎಂದು ನಮೂದಿಸಿದ್ದು , ಕಛೇರಿ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ . ನಿಪಿ 25 ಕಚ್ಚಾ ನಕಾಶೆ , ನಿಪಿ 33 ಪಿಡಬ್ಲ್ಯೂಡಿ ನಕಾಶೆಯಾಗಿದ್ದು , ಎರಡೂ ನಕಾಶೆಯಲ್ಲೂ ಕೂಡ ದೂರುದಾರರು ಎಲ್ಲಿ ನಿಂತು ಸೂಚನೆ ನೀಡಿರುತ್ತಾನೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ . ನಿಪಿ 37 ರ ಮಾಹಿತಿಯ ಪ್ರಕಾರ ಆರೋಪಿಗೆ ಭೂ ಪರಿವರ್ತನೆಯಲ್ಲಿ ವೈಯಕ್ತಿಕವಾಗಿ ಸ್ವತಂತ್ರವಾದ ಯಾವುದೇ ಅಧಿಕಾರ ಇರುವ ಬಗ್ಗೆ ನಮೂದು ಇರುವುದಿಲ್ಲ , ಕೇವಲ ರಾಜಸ್ವ ನಿರೀಕ್ಷಕರ ಜೊತೆಗೆ ಹೋಗಬೇಕು ಎಂದು ನಮೂದು ಆಗಿರುತ್ತದೆ ಎಂದರೆ ಸರಿ.

19. ದಿಃ 31.12.2016 ರ ಸುತ್ತೋಲೆಯನ್ನು ಪಡೆದುಕೊಂಡಿರುತ್ತೀರಿ ಎಂದರೆ ಸರಿ. ಜಿಲ್ಲಾಧಿಕಾರಿಯವರ ಕಾರ್ಯಾಲಯದಿಂದ ಜಾರಿಯಾದ ಸುತ್ತೋಲೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಗೆ ಭೂ ಪರಿವರ್ತನೆ ಬಗ್ಗೆ ಯಾವುದೇ ಕೆಲಸ ಅಥವಾ ಅಧಿಕಾರ ಇರುವುದಿಲ್ಲ ಎಂದರೆ ಸರಿ . ನಿಪಿ 37 ರಲ್ಲಿ ಕಾಲಂ ನಂ. 3 ರಲ್ಲಿ ಗ್ರಾಮ ಲೆಕ್ಕಾಧಿಕಾರಿ ರಾಜಸ್ವ ನಿರೀಕ್ಷಕರ ಜೊತೆಗೆ ಹಾಜರಿರಬೇಕು ಎಂದು ನಮೂದಿಸಲಾಗಿದ್ದು , ಅದನ್ನು ಯಾವ ಆಧಾರದ ಮೇಲೆ ಮಾಹಿತಿ ನೀಡಲಾಗಿದೆ ಎಂದು ಸ್ವತಂತ್ರವಾಗಿ ಪರಿಶೀಲಿಸಿರುತ್ತೀರಿ ಎಂದರೆ , ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಪ್ರಕರಣದಲ್ಲಿ ಚಾ,ಸಾ. 8,10,2,6,7 ಮತ್ತು ಠಾಣಾ ಸಿಬ್ಬಂದಿಗಳಾದ ಚಾ,ಸಾ.13,9,12 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ , ಅವುಗಳನ್ನು ಪ್ರಕರಣಕ್ಕೋಸ್ಕರ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನೀವು ಸಾಕಷ್ಟು ಅನುಭವ ವಿರುತ್ತದೆ ಎಂದು ಹೇಳಿದ್ದು , ನಿಪಿ 41,42,43 ಕಲಂ 65(ಬಿ) ಅಡಿಯ ಪ್ರಮಾಣ ಪತ್ರ ನೀಡಿದ್ದು , ಸದರಿ ಪ್ರಮಾಣ ಪತ್ರಗಳು ಕಲಂ 65(4) ರೀತಿಯಲ್ಲಿ ಇರುತ್ತವೆಯೇ , ಎಂದರೆ ಸಾಕ್ಷಿ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ತನಿಖೆಯ ಬಗ್ಗೆ ಯಾವುದೇ ಅನುಭವ ಇರುವುದಿಲ್ಲ , ಆದರೂ ಕೂಡ ಪ್ರಮಾಣ ಪತ್ರ ಪೂರಕವಾಗಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಅಭಿಯೋಜನಾ ಮಂಜೂರಾತಿಗೆ ನಾನು ಯಾವುದೇ ಪೂರಕ ದಾಖಲೆಗಳನ್ನು ಕಳುಹಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ತನಿಖೆಯನ್ನು ನಿಂಗರಾಜು ಹೇಳಿದಂತೆ ಮಾಡಿರುತ್ತೇನೆ ಎಂದರೆ ಸರಿ .

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.